# ಮಾಗಿದ ಮಡಿಲು

■ ಪ್ರಕಾಶ ಗ. ಖಾಡೆ



ಚಿತ್ರ: ಎಐ

**ಒಬ್ಬ ಹಣ್ಣುಗಾಯಿ ಮುದುಕಿ ತನಗೆ ಮಗು ಕೊಡಿ, ತಾನು ಸಂಭಾಳಿಸುತ್ತೇನೆ ಅಂದಳು. ಅವಳ ವೇಷಭೂಷಣ, ಬಟ್ಟೆ ಬರೆ ನೋಡಿ ಇಂಥವರ ಕೈಯಲ್ಲಿ ಮಗು ಕೊಡುವುದೇ ಎಂದು ಕುಟುಂಬ ಹಿಂದೇಟು ಹಾಕಿತು. ಆದರೂ ಮಗುವಿನ ತಾಯಿ ಮಗುವನ್ನು ಮುದುಕಿ ಕೈಗಿತ್ತಳು.**

ರೈಲು ವೇಗವಾಗಿ ಸಾಗಿತ್ತು. ಇಡೀ ಬೋಗಿಯೇ ಮಗುವಿನ ಅಳುವಿಗೆ ಬೆಚ್ಚಿಬಿದ್ದಿತ್ತು. ಮಗು ಸದ್ಯಕ್ಕಂತೂ ಅಳುವ ನಿಲ್ಲಿಸುವ ಯಾವ ಮುನ್ಸೂಚನೆಯೂ ಕಾಣಲಿಲ್ಲ. ತಾಯಿ ಗಾಬರಿಗೆ ಬಿದ್ದಳು. ಕುಟುಂಬ ವರ್ಗದವರಲ್ಲದೆ ಸಹ ಪ್ರಯಾಣಿಕರು ಎತ್ತಿಕೊಂಡು ಮಗುವನ್ನು ಸುಮ್ಮನಿರಿಸಲು ನೋಡಿದರು. ಆದರೆ ಮಗು ತೆರೆದ ಬಾಯಿ ತೆರೆದಂತೆ ಚೀರಿ ಚೀರಿ ಅಳುತಿತ್ತು. ತಾಯಿಯ ಮರುಕ ಚಡಪಡಿಕೆ ಸಹ ಪ್ರಯಾಣಿಕರಲ್ಲಿ ವಿಷಣ್ಣತೆ ತುಂಬಿತು. ಮಗುವಿಗೆ ಏನಾಗಿದೆ? ಈ ರೈಲಿನಲ್ಲಿ ಯಾರಾದರೂ ಡಾಕ್ಟರ್ ಇರಬಹುದೇ ನೋಡಿ ಎಂದು ಬೋಗಿಯಲ್ಲಿ ಕುಳಿತ ಜನರನ್ನು ವಿಚಾರಿಸಲಾಗಿ ಒಬ್ಬ ಯುವ ಡಾಕ್ಟರತಿ ಸಿಕ್ಕಳು. ಅವಳ ಕೈಗೆ ಮಗುವನ್ನು ಕೊಟ್ಟು ಸಂತೈಸಲು ನೋಡಿದರು. ಮಗು ಇನ್ನಷ್ಟು ಅಳಲು ಜೋರು ಮಾಡಿತೇ ಹೊರತು ತನ್ನ ರೋದನೆಯನ್ನು ನಿಲ್ಲಿಸಲಿಲ್ಲ. ತಾಯಿಯಿಂದ ಮಗುವನ್ನು ಅದೆಷ್ಟೋ ಜನರು ತಮ್ಮ ತೆಕ್ಕೆಗೆ ತೆಗೆದುಕೊಂಡು ಸಂತೈಸಿದರೂ ಮಗುವಿನ ಅಳು ನಿಲ್ಲಲಿಲ್ಲ. ಕುಟುಂಬ ವರ್ಗದವರು ಗಾಬರಿಯಾದರು. ಎಲ್ಲಿ ಮಗುವಿಗೆ ಗಾಳಿ ಗೀಳಿಯಾಗಿ ದೇವರು ಅಥವಾ ದೆವ್ವ ಬಡಿದಿದೆಯೋ ಎಂದು ಜನ ಮಾತನಾಡಿಕೊಳ್ಳತೊಡಗಿದರು. ಇಡೀ ರೈಲು ಬೋಗಿಯೇ ಎಚ್ಚರವಿದ್ದು ಸಂತೈಸಲು ನೋಡಿದರು.

ಮಗು ತನ್ನ ಅಳುವನ್ನು ಇನ್ನಷ್ಟು ಜೋರು ಮಾಡಿತೇ ಹೊರತು ಅದು ನಿಲ್ಲಿಸುವ ಯಾವ ಭರವಸೆಯೂ ಕಾಣಲಿಲ್ಲ. ಬೋಗಿಯಲ್ಲಿ ಖಾವಿ ತೊಟ್ಟ ಸ್ವಾಮೀಜಿ ಒಬ್ಬರು ಕಂಡರು. ದೈವ ಸ್ವರೂಪರಾದ ತಾವಾದರೂ ನೋಡಿ ಈ ಮಗುವಿನ ಅಳು ನಿಲ್ಲಿಸಿ ಎಂದು ಕೋರಿದರು. ಸ್ವಾಮಿ ತನ್ನ ಬಗಲ ಚೀಲದಿಂದ ತಂದ ಅಂಗಾರ ಪುಡಿ ಹಣೆಗೆ ಹಚ್ಚಿ ನೋಡಿದರು. ಮಗು ಮತ್ತಷ್ಟು ಚಿಟ್ಟನೇ ಚೀರಿ ತಾಯಿ ಕಡೆಗೆ ಕೈ ಮಾಡಿತು. ಇದೆಲ್ಲವನ್ನು ತುಂಬಾ ಕುತೂಹಲದಿಂದ ನೋಡುತ್ತಿದ್ದ ಮಂಗಳೂರಿಗೆ ದುಡಿಯಲು ಗುಳೆ ಹೊರಟ ತಂಡದಲ್ಲಿದ್ದ ಒಬ್ಬ ಹಣ್ಣುಗಾಯಿ ಮುದುಕಿ ತನಗೆ ಮಗು ಕೊಡಿ, ತಾನು ಸಂಭಾಳಿಸುತ್ತೇನೆ ಅಂದಳು. ಅವಳ ವೇಷಭೂಷಣ ಬಟ್ಟೆ ಬರೆ ನೋಡಿ ಇಂಥವರ ಕೈಯಲ್ಲಿ ಮಗು ಕೊಡುವುದೇ ಎಂದು ಕುಟುಂಬ ವರ್ಗದವರು ಹಿಂದೇಟು ಹಾಕತೊಡಗಿದರು. ಆಗ ಮಗುವಿನ ತಾಯಿ ಇದ್ದವಳು ಏನಾದರಾಗಲಿ ಒಂದು ಪ್ರಯತ್ನ ಮಾಡೋಣ ಎಂದು ಮುದುಕಿಯ ಕೈಯಲ್ಲಿ ಕೊಟ್ಟಳು.

ಮುದುಕಿ ಮಗುವನ್ನು ಹೂವಿನಂತೆ ಎತ್ತಿಕೊಂಡು, ಮಗುವಿನ ಕೈ ಕಾಲು ಮೈಯನ್ನು ನಿಧಾನಕ್ಕೆ ಸವರತೊಡಗಿದಳು. ಮಗುವಿನ ಬೆನ್ನು ಉಜ್ಜಿ ಸಮಾಧಾನ ಹೇಳಿದಳು. ಆವಾಗ ಮಗು ಹಿತವೆನಿಸಿ ನಿಧಾನಕ್ಕೆ ಅಳು ನಿಲ್ಲಿಸಿ, ಮಾಗಿದ ಮುದುಕಿಯ ಕಂಡು ಒಂದು ಮುಗುಳ್ನಗೆ ನಕ್ಕು ತಾಯ ಮಡಿಲ ಸೇರಿತು. ತಾಯ ಎದೆಹಾಲು ಕುಡಿದು ನಿಧಾನಕ್ಕೆ ನಿದ್ರೆಗೆ ಜಾರಿತು. ಇಡೀ ರೈಲು ಬೋಗಿಯ ಪ್ರಯಾಣಿಕರೆಲ್ಲರೂ ಈ ಅಪರಿಚಿತ ಮುದುಕಿಯನ್ನು ಸಾಕ್ಷಾತ್ ದೇವರಂತೆ ಕಂಡು ಅವಳಿಗೆ ವಂದಿಸಿದರು. ಕುಟುಂಬ ವರ್ಗದವರು ಸ್ವತಃ ತದಲಬಾಗಿ ಲಕ್ಕವ್ವನೇ ಅಜ್ಜಿ ವೇಷದಲ್ಲಿ ಬಂದು ಮಗುವನ್ನು ಸಮಾಧಾನ ಮಾಡಿದ್ದಾಳೆ ಎಂದು ನಮಿಸಿ ಕೃತಜ್ಞತೆ ಅರ್ಪಿಸಿದರು.

ಇದಾಗಿ ಎಲ್ಲರೂ ತಮ್ಮ ತಮ್ಮ ಲೋಕದಲ್ಲಿ ಮುಳುಗಿರುವಾಗ ಮುದುಕಿಯ ಮೊಮ್ಮಗ ಅಜ್ಜಿಯ ಕಡೆ ಬಂದು 'ಎಲ್ಲರನ್ನೂ ಬಿಟ್ಟು ನಿನ್ನ ಕೈಯಲ್ಲಿ ಮಗು ಹೇಗೆ ಸುಮ್ಮನಾಯಿತು, ನೀನು ಏನಾದರೂ ಮಾಟ ಮಂತ್ರ ಮಾಡಿದೆಯಾ' ಎಂದು ಕೇಳಿತು. ಮುದುಕಿ ನಸು ನಕ್ಕು ಹೇಳಿದಳು 'ಇಲ್ಲಾ ತಮ್ಮಾ, ನಾ ಯಾವ ಮಾಟ ಮಂತ್ರ ಮಾಡಿಲ್ಲಾ, ಮಗುವಿನ ಮೈಮೇಲೆ ಏನಾದರೂ ಇರುವೆ ಗಿರುವೆ ಓಡಾಡಿರಬಹುದು, ಇಲ್ಲವೇ ಬೆನ್ನ ಮೇಲೆ ಕುಳಿತು ಕಚ್ಚುತ್ತಿರಬಹುದೆಂದು ಭಾವಿಸಿಕೊಂಡು ನಾನು ನಿಧಾನಕ್ಕೆ ಮೈ ಸವರಿದಾಗ ಇರುವೆ ಸರಿದು ಹೋಗಿ ಮಗು ನಿರಾಳವಾಯಿತು' ಎಂದಳು. ಅಜ್ಜಿಯ ತಕ್ಷಣದ ಬುದ್ಧಿವಂತಿಕೆಗೆ ತಲೆದೂಗಿದ ಮೊಮ್ಮಗ ಮನಸ್ಸಿನಲ್ಲಿಯೇ ಮುಗಳ್ನಕ್ಕು, ರೈಲಿನ ಕಿಟಕಿಯಾಚೆ ನೋಡಿದ. ಹೊರಗಿನ ಹಸಿರಹೊದ್ದ ಜೋಡು ಬೆಟ್ಟಗಳು ತಾಯ ಎದೆಯ ಪ್ರೀತಿಯಂತೆ ಕಂಡವು. ■